ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತೆ ಅಂಗಡಿ ತೆರೆದಿರುವುದು ನಿಜ ಅದರೆ ಅವರ ಮೇಲೆ ರೈಡ ಮಾಡಿ ಸೂಕ್ತ ಕ್ರಮ ತೆಗೆದುಕೊಂಡಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್.—ಉಡುಪಿ ತಾಲ್ಲೂಕಿಗೆ ಅನೇಕ ದೊಡ್ಡ ದೊಡ್ಡ ಮನುಷ್ಯರು ಹೋಗಿಬರುವುದರಿಂದ ಸೇಂದಿ, ಶರಾಬು ಅಂಗಡಿಗಳನ್ನು ಜೊಕ್ಕಟವಾಗಿಟ್ಟು ಬಂದವರಿಗೆ ಅದನ್ನು ಕೊಡುವ ವ್ಯವಸ್ಥೆ ಮಾಡುತ್ತಾರೆ. ಆಲ್ಲಿ ಕೆಮಿಕಲ್ ಪ್ರೋಸೆಸ್ಸಿನಲ್ಲಿ ಸೇಂದಿ ತಯಾರು ಮಾಡುತ್ತಿದ್ದಾರೆ, ಇದರಿಂದ ಜನತೆ ಸಾಯುತ್ತಾರೆ. ಇಂಥದ್ದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಶ್ನೆಗೆ ಉಪ ಪ್ರಶ್ನೆ ಆದಲ್ಲ.

Sri N.B. SIRDESAI —May I know whether the Government contemplate any steps to prevent arrack contractors from selling arrack in the vicinity of the schools ? This is necessary in the interest of the school-going children.

Sri K. H. PATIL.—This question does not arise as a subsidiary to the main question.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಎಂ. ಎಲ್. ಎ. ಮನೆಯ ಹತ್ತಿರ ಒಂದು ಅರ್ಜಿಕ್ಷಾಪ ತೆಗೆದಿರಬೇಕಾದರೆ; ಅದಕ್ಕೇನಾದರೂ ಒಂದು ಮಹತ್ವ ಇರಬೇಕು. ಅದನ್ನು ಕಂಡುಹಿಡಿಯುತ್ತಿರಾ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೇನಾದರೂ ಈ ವಿಷಯದ ಬಗ್ಗೆ ಗೊತ್ತಿದ್ದರೆ, ಅದನ್ನು ತಿಳಿಸಿದರೆ ವಿಚಾರಿಸಲಾಗುತ್ತದೆ. ಸಮಾಜದಲ್ಲಿರುವ ರೋಗರುಜಿನಗಳೇ ಇದಕ್ಕೆ ಕಾರಣವೆಂದೂ ಹೇಳಬಹುದು.

ಶ್ರೀ ಎಂ. ಬಿ ರಾವಂಸ್ವಾಮಿ.— (ಆ)ಗ ಉತ್ತರವಾಗಿ ಕೆಲವು ದೂರುಗಳು ಬಂದಿದ್ದವು ಎಂಬುದಾಗಿ ಹೇಳಿದ್ದಿರಿ. ಎಷ್ಟು ದೂರುಗಳು ಬಂದಿವೆ? ಅವುಗಳ ಬಗ್ಗೆ ಯಾವ್ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

Sri K. H. PATIL.—The particulars are not heare.

Sri M. B. RAMASWAMY.—How may complaints have been received.

MADAMSPEAKER.—That is exactly the question which the Ministe has replied?

ಶ್ರೀ ಬಿ. ಭಾಸ್ಕರಶೆಟ್ಟಿ.—ಉತ್ತರದಲ್ಲಿ ಕಂಟ್ರಾಕ್ಟರ್ ಇಂತಹ ಯಾವುದೆ ಅಂಗಡಿಗಳನು ಅನಧಿಕೃತವಾಗಿ ತೆರೆದಿರುವುದಲ್ಲವೆಂದು ಹೇಳಿದೆ. ಯಾರೋ ಒಬ್ಬರು ತೆರೆದಿದ್ದಾರೆ. ಅದನ್ನು ತನಿಖೆ ಮಾಡಲಾಗಿದೆಯೆಂದು ಹೇಳಿದೆ. ಅನಧಿಕೃತ ಶರಾಬು ಅಂಗಡಿಯಲ್ಲಿ ಸರ್ಕಾರದ ಶರಾಬು ಸಿಕ್ಕಿರುವಾಗ ಅದು ಕಂಟ್ರಾಕ್ಟ್‌ದಾರರದಲ್ಲವೆಂದು ಹೇಗೆ ಹೇಳುತ್ತೀರಿ ? ಇಲ್ಲದಿದ್ದರೆ ಅಧಿಕೃತವಾದ ಅಂಗಡಿಗೆ ಸರ್ಕಾರಿ ಶರಾಬು ಹೇಗೆ ಬಂತು ?

ಶ್ರೀ ಕೆ. ಎಚ್. ಪಾಟೀಲ್.—ಕಂಟ್ರಾಕ್ಟ್‌ದಾರರಿಂದ ಬಂತೋ, ಸರ್ಕಾರದಿಂದ ಬಂತೋ ಗೊತ್ತಿಲ್ಲ. ಮಾನ್ಯ ಸದಸ್ಯರ ಪ್ರಶ್ನೆ ಅನಧಿಕೃತ ಅಂಗಡಿ ಆಲ್ಲಿ ತೆರೆದಿದೆಯೇ ಎಂದು ಅದಕ್ಕೆ ತೆರೆದಿಲ್ಲವೆಂದು ಉತ್ತರದಲ್ಲಿ ಹೇಳಿದೆ.

DISPARITY IN PAY SCALES OF STAFF OF SURVEY, SETTLEMENT AND LAND RECORDS DEPARTMENT.

318. SRI K. R. SRINIVASALU NAYUDU (Shantinagar).—

Will the Minister for Revenue be pleased to state.—

(*a*) whether the Government is aware that Surveyors and Supervisors working in Survey, Settlement and Land Records Department attend to technical work such as Surveying by chain by plane table and by theodolite :

(*b*) if so, the reasons for not considering these officials as technical staff and for not considering the Survey, Settlement and Land Records Department as technical Department ;

(*c*) whether there is any difference in the pay scales of staff working in this Department and that of other technical Departments ?

SRI N. HUTCHMASTHY GOWDA (MINISTER FOR REVENUE).—

(*a*) Yes.

(*b*) Only a portion of the work done by these officials namely that relating measurement and mapping work is of technical nature But the work as a whole is administrative and academic requiring wide general experience. Hence there is no case to declare the Survey Department as a technical one.

(*c*) Yes, there is slight difference.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—(ಅ) ಪ್ರಶ್ನೆಗೆ ಉತ್ತರವಾಗಿ 'ಗೊತ್ತಿದೆ' ಎಂಬುದಾಗಿ ಹೇಳಿದೆ. (ಇ) ಪ್ರಶ್ನೆಗೆ ಉತ್ತರವಾಗಿಯೂ 'ಇದೆ' ಸ್ವಲ್ಪಮಟ್ಟಿನ ವ್ಯತ್ಯಾಸವಿದೆಯೆಂದು ಹೇಳಿದೆ. ೧೨ ನವೆಂಬರ್ ೧೯೬೯ಕ್ಕೆ ಹಿಂದೆ ಈ ಇಲಾಖೆಯ ಮುಖ್ಯಾಧಿಕಾರಿ ಐ. ಎ. ಎಸ್. ಕೇಡರ್‌ನಲ್ಲಿ ಇರುತ್ತಿದ್ದರು, ಇದನ್ನು ಬದಲಾವಣೆ ಮಾಡಬೇಕೆಂದು ಪೇಳಿ ಆಗ ಟೆಕ್ನಿಕಲ್ ಆಫೀಸರ್ ಇರಬೇಕೆಂದು ಅವರನ್ನು ಡೈರೆಕ್ಟರ್ ಆಫ್ ಸರ್ವೆ ಅಂಡ್ ಸೆಟಲ್‌ಮೆಂಟ್ ಆಗಿ ಮಾಡಿರಲಿಲ್ಲವೇ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಉತ್ತರದಲ್ಲಿರುವ ಹಾಗೆ ಮೊದಲನೆಯದಾಗಿ ಕೇಳಿರುವ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುವುದು ಸರಿ. ಎರಡನೆಯದಕ್ಕೆ ಉತ್ತರ ಕೊಟ್ಟಿರುವುದೂ ಸರಿ. ಮೊದಲು ಅಲ್ಲಿ ಐ. ಎ. ಎಸ್. ಆಫೀಸರು ಇದ್ದುದು ನಿಜ. ಆದರೆ ಯಾವ ಕಾರಣದಿಂದ ಈ ಮಧ್ಯೆ ಸರ್ವೆ ಡಿಪಾರ್ಟ್‌ಮೆಂಟಿಗೆ ಸೇರಿದ ಅಧಿಕಾರಿಯನ್ನು ಡೈರೆಕ್ಟರ್ ಆಗಿ ನೇಮಿಸಿದ್ದಾರೆಂಬ ಬಗ್ಗೆ ನನ್ನ ಮುಂದೆ ಅಂಕಿ ಅಂಶಗಳು ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು :—ಇದರ ಜೊತೆಗೆ ಮೂರನೇ ಆಲ್ ಇಂಡಿಯಾ ಕಾನ್‌ಫರೆನ್ಸ್ ಒನ್ನೇ ಅಕ್ಟೋಬರ್ ೬೭ರಲ್ಲಿ ನಡೆದಾಗ, ಅದರು ಇದನ್ನು ಒಂದು ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಮಾಡಬೇಕೆಂದು ಹೇಳಿದ್ದಾರೆ. ಈಗ ಹಾಲಿ ಇರತಕ್ಕಂತಹ ಡೈರೆಕ್ಟರ್ ಸಹ ಇದನ್ನು ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಮಾಡಬೇಕೆಂದು ಶಿಫಾರಸು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಬಂದಿದೆ.

ಶ್ರೀ ಎ. ಎನ್. ಪಾಟೀಲ್ :—ತಮ್ಮ ಗಮನಕ್ಕೆ ಇದೆಲ್ಲಾ ಬಂದಿವೆ ಎಂದು ಒಪ್ಪುತ್ತಿದ್ದೀರಿ. ಅದೇ ರೀತಿ ಲ್ಯಾಂಡ್ ರಿಕಾರ್ಡ್ಸ್ ಮತ್ತು ಟೆಕ್ನಿಕಲ್ ಇಲಾಖೆಯ ಸ್ಟಾಫಿನ ಸಂಬಳದಲ್ಲಿಯೂ ವ್ಯತ್ಯಾಸ ಇದೆಯೆಂದು ಒಪ್ಪಿದ್ದೀರಿ. ಆದ್ದರಿಂದ ಈವರೆಗೆ ಆಗಿರುವ ಅನ್ಯಾಯವನ್ನು ಹೋಗಲಾಡಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮೊದಲನೆಯದಾಗಿ ಇದನ್ನು ತಾಂತ್ರಿಕ ಇಲಾಖೆಯೆಂದು ಸರ್ಕಾರ ಒಪ್ಪಿಕೊಂಡಿಲ್ಲ. ಏಕೆಂದರೆ ಈ ಇಲಾಖೆಯಲ್ಲಿ ಆಗಬೇಕಾದ ಕೆಲವು ಕೆಲಸ ಮಾತ್ರ ತಾಂತ್ರಿಕ ವಾದವುಗಳು ; ಉಳಿದವುಗಳು ಆಡಳಿತಾತ್ಮಕವಾದವುಗಳು ಮತ್ತು ಶೈಕ್ಷಣಿಕವಾದವುಗಳು ಮತ್ತು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ ಪೇ ಸ್ಕೇಲ್ ಅಪರವರ ಕೆಲಸಕ್ಕನುಗುಣವಾಗಿ ಕೊಡಲಾಗಿದೆ.

ಶ್ರೀ ಸಿ. ಟಿ. ಗುಡ್ಡಕಾಯಿ.—ಅರಣ್ಯ ಇಲಾಖೆಯಲ್ಲಿ ಮತ್ತು ಅಗ್ರಿಕಲ್ಚರಲ್ ಇಲಾಖೆಯಲ್ಲಿ ಇದೇ ಉಪಕರಣಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡುವಂತಹ ಜನರಿಗೆ ತಾಂತ್ರಿಕ ಇಲಾಖೆಯ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದೀರಿ. ಆದರೆ ಇವರಿಗೆ ಆ ರೀತಿ ಕೊಡದಿರಲು ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಇಲಾಖೆಯಲ್ಲಿ ಕೆಲಸ ಮಾಡುವಾಗ ಎರಡೂ ಒಟ್ಟು ಗೂಡುತ್ತದೆ. ಆದರೆ ಅಲ್ಲಿ ಪ್ರತ್ಯೇಕವಾಗಿ ಅದೇ ಕೆಲಸವನ್ನು ಮಾಡುವುದರಿಂದ ಆ ರೀತಿ ಗೊತ್ತು ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಇದನ್ನು ತಾಂತ್ರಿಕ ಇಲಾಖೆಯೆಂದು ಪರಿಗಣಿಸಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಇವರು, ತಾಂತ್ರಿಕ ಮತ್ತು ಆಡಳಿತಾತ್ಮಕವಾದ ಕೆಲಸಗಳನ್ನು ಮಾಡುತ್ತಾರೆ ಎಂದು ಹೇಳಿದ್ದೀರಿ. ಇವರು ಆಡಳಿತಾತ್ಮಕ ಮತ್ತು ತಾಂತ್ರಿಕ ಕೆಲಸ ಮಾಡುವುದರಿಂದ ಇವರಿಗೆ ತಾಂತ್ರಿಕ ಇಲಾಖೆಯ ಸಂಬಳಕ್ಕಿಂತ ಕಡಿಮೆ ಕೊಡುತ್ತಿರುವುದು ಅನ್ಯಾಯವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆ ಬಹಳ ಸೂಕ್ಷ್ಮವಾದುದು. ಅವರು ಒಬ್ಬನೇ ಅಧಿಕಾರಿ ಎರಡು ಕೆಲಸ ಮಾಡುತ್ತಾನೆ ಎನ್ನುವ ರೀತಿಯಲ್ಲಿ ಹೇಳಿದರು. ಆದ್ದರಿಂದ ಅವನಿಗೆ ಅಡಿಶನಲ್ ಕೆಲಸ ಇದೆಯೆಂದೇನೂ ಇಲ್ಲ. ಅವನಿಗೆ ಗೊತ್ತು ಮಾಡುವಾಗ ಈ ಕೆಲಸ ಇಷ್ಟು ಆ ಕೆಲಸ ಇಷ್ಟು ಎಂದು ಮಾಡಲಾಗುತ್ತದೆ. ಆ ರೀತಿ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ.

SRI K. PRABHAKAR.—What are the factors that are considered to be necessary to consider the work of a department as highly technical ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಕೆಲವು ತಾಂತ್ರಿಕ ಭಾಗದ ಕೆಲಸ ಇದೆ ; ಕೆಲವು ಭಾಗ ಬೇರೆ ಕೆಲಸ ಇದೆ. ಹೀಗೆ ಇದ್ದರೆ ಮಾತ್ರ ತಾಂತ್ರಿಕವಾದುದು ಎಂದು ಹೇಳತಕ್ಕ ಪದ್ಧತಿ ಇಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಇಲಾಖೆಯಲ್ಲಿ ಬಿಸಿಲಿಗೆ ನಿಂತುಕೊಂಡು ಸರ್ವೆ ಮಾಡಬೇಕಾಗುತ್ತದೆ. ಒಂಬೊಂದು ವರ್ಷದಲ್ಲಿ ೫೦೦ ಮಂದಿ ಸರ್ವೆಯರುಗಳನ್ನು ನೇಮಕ ಮಾಡುತ್ತಿದ್ದಾರೆ. ಆದರೆ ಪೇ ಸ್ಕೇಲಿನಲ್ಲಿ ಬಹಳ ವ್ಯತ್ಯಾಸ ಇದೆ. ಅದನ್ನು ಈಗಲಾದರೂ ಬೇರೆ ಅಗ್ರಿಕಲ್ಚರ್ ಇಲಾಖೆಯಲ್ಲಿ ಇದ್ದಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ —ಅಖಿಲ ಭಾರತ ಕ್ಯಾಡೆಸ್ಟ್ರಲ್ ಸರ್ವೆ ಕಾನ್‌ಫರೆನ್ಸಿನಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಅದರ ಪ್ರಕಾರ ರೀಸರ್ವೆ ಮಾಡುವಾಗ—ಸಿಟಿ ಸರ್ವೆ ಮಾಡುವಾಗ ಇದಕ್ಕೆಲ್ಲಾ ವಿಶೇಷವಾದಂತಹ ಅತ್ಯಾಧುನಿಕವಾದ ಯಂತ್ರಗಳನ್ನು ಉಪಯೋಗಿಸಲು ಅವರಿಗೆ ಸಾಕಷ್ಟು ಶಿಕ್ಷಣ ಕೊಡಬೇಕೆಂದು ತಿಳಿಸಿದ್ದಾರೆ. ಈ ವಿಷಯದಲ್ಲಿ ಮಾನ್ಯ ಸಭೆಯ ಅಭಿಪ್ರಾಯ ಅದನ್ನು ತಾಂತ್ರಿಕ ಇಲಾಖೆ ಎಂದು ಗೊತ್ತು ಮಾಡಬೇಕೆಂದಿರುವುದಾದರೆ, ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಮೂರನೆಯ ಪ್ರಶ್ನೆಗೆ ಹೌದು ಸ್ವಲ್ಪ ಮಟ್ಟಿನ ವ್ಯತ್ಯಾಸವಿದೆ ಎಂದು ಹೇಳಿದ್ದೀರಿ. ಇಲ್ಲಿ ಫಾರೆಸ್ಟ್ ಇಲಾಖೆಯಲ್ಲಿ ಸರ್ವೇಯರಿಗೆ ಜಾಸ್ತಿ ಸಂಬಳ ಸ್ಕೇಲು ಕೊಟ್ಟು, ಅಗ್ರಿಕಲ್ಚರಲ್ ಇಲಾಖೆಯಲ್ಲಿ ಜಾಸ್ತಿ ಕೊಟ್ಟು , ಸರ್ವೆ ಇಲಾಖೆಯಲ್ಲಿ ಕಮ್ಮಿ ಕೊಡುವುದು ನ್ಯಾಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಕೊಟ್ಟಿರುವ ಡೆಸಿಗ್ನೇಶನ್ನಿನಲ್ಲಿ ವ್ಯತ್ಯಾಸ ಇದೆ. ಒಂದು ಇಲಾಖೆಯಲ್ಲಿ ಫಸ್ಟ್ ಡಿವಿಜನ್ ಸರ್ವೇಯರ್ ಎಂದು ಇದೆ : ಇನ್ನೊಂದು ಇಲಾಖೆಯಲ್ಲಿ ಸೂಪರ್ ವೈಸರ್ ಎಂದು ಕರೆಯುತ್ತಾರೆ.

ALLOTMENT OF LAND TO HORTICULTURE DEPARTMENT

377. SMT. C. NAGAMMA KESHAVAMURTHY (Davanagere) :—

Will the Minister for Agriculture and Forests be pleased to state :—